# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1372 (1536) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರಪಾಲಿಕೆ (BBMP) ಸೇರಿದಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಹಿಂದೆ ಕೆಪಿಎಸ್‌ಸಿ ಮೂಲಕ ಗ್ರೂಪ್ -ಸಿ (Group-c) ದರ್ಜೆಯ ವರ್ಕ್ ಇನ್‌ಸ್ಪೆಕ್ಟರ್ (Work Inspector) ಹುದ್ದೆಗಳಿಗೆ ನೇಮಕಗೊಂಡಿದ್ದ ನೌಕರರನ್ನು 2011ರಲ್ಲಿ ಅಸಿಸ್ಟೆಂಟ್ ವಾಟರ್ ಸಪ್ಲೈ ಆಪರೇಟರ್ (Assistant Water Supply Operator) ಎಂದು ನಾಮಕಾರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೃಹತ್ ಬೆಂಗಳೂರು ಮಹಾನಗರಪಾಲಿಕೆ (BBMP) (ಹೊರತುಪಡಿಸಿದಂತೆ) ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಹಿಂದೆ ಕೆಪಿಎಸ್‌ಸಿ ಮೂಲಕ ಗ್ರೂಪ್ -ಸಿ (Group-c) ದರ್ಜೆಯ ವರ್ಕ್ ಇನ್‌ಸ್ಪೆಕ್ಟರ್ (Work Inspector) ಹುದ್ದೆಗಳಿಗೆ ನೇಮಕಗೊಂಡಿದ್ದ ನೌಕರರನ್ನು 2011ರಲ್ಲಿ ಅಸಿಸ್ಟೆಂಟ್ ವಾಟರ್ ಸಪ್ಲೈ ಆಪರೇಟರ್ (Assistant Water Supply Operator) ಎಂದು ನಾಮಕಾರಣ ಮಾಡಿರುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಎಸಿಬಿ 2009, ದಿನಾಂಕ:11.04.2011ರಂದು ಮಹಾನಗರಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮವು ಜಾರಿಗೆ ಬಂದಿರುತ್ತದೆ. ಸದರಿ ನೇಮಕಾತಿ ನಿಯಮಗಳಲ್ಲಿ ಗ್ರೇಡ್-2 ಮಹಾನಗರ ಪಾಲಿಕೆಗೆ 140 ಮತ್ತು ಗ್ರೇಡ್-4 ಮಹಾನಗರ ಪಾಲಿಕೆಗೆ 240, ಒಟ್ಟು 380 ಕಾಮಗಾರಿ ನಿರೀಕ್ಷಕರ ಹುದ್ದೆಗಳು ಮಂಜೂರಾಗಿದ್ದು, ತದನಂತರ ಸರ್ಕಾರದ ಆದೇಶ ಸಂಖ್ಯೆ: ನಅಇ 169 ಎಂಎನ್‌ಇ 2017(ಭಾ-1), ದಿನಾಂಕ: 05.01.2021ರಲ್ಲಿ ಕಾಮಗಾರಿ ನಿರೀಕ್ಷಕರ ಒಟ್ಟು 380 ಹುದ್ದೆಗಳನ್ನು ರದ್ದುಪಡಿಸಲಾಗಿರುತ್ತದೆ. |
| ಆ) | ರಾಜ್ಯದ ನಗರಸಭೆ ಮತ್ತು ಪುರಸಭೆಗಳಲ್ಲಿ ಈ ಹುದ್ದೆಗಳನ್ನು ಆಪರೇಟರ್ ಹುದ್ದೆಗಳೆಂದು ವರ್ಗೀಕರಿಸಲಾಗಿದ್ದರೂ, ವಾಸ್ತವದಲ್ಲಿ ಈ ನೌಕರರನ್ನು ವಾಲ್‌ಮೆನ್ (Valveman) ಎಂಬ ಗ್ರೂಪ್-ಡಿ ಸಮಾನಂತರ ಹುದ್ದೆಗಳೆಂದು ಪರಿಗಣಿಸಿ ಕೆಳಹಂತದ ಕೆಲಸಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ರಾಜ್ಯದ ನಗರಸಭೆ ಮತ್ತು ಪುರಸಭೆಗಳಲ್ಲಿ ವರ್ಕ್ ಇನ್ಸ್ ಪೆಕ್ಟರ್ ಹುದ್ದೆಗಳು ಮಂಜೂರಾಗಿರುವುದಿಲ್ಲ. |
| ಇ) | ಕೆಪಿಎಸ್‌ಸಿ ಮೂಲಕ ನಿರ್ದಿಷ್ಟ ತಾಂತ್ರಿಕ ವಿದ್ಯಾರ್ಹತೆಯ ಆಧಾರದ ಮೇಲೆ ಗ್ರೂಪ್-ಸಿ ದರ್ಜೆಗೆ ಆಯ್ಕೆಯಾದ ನೌಕರರಿಗೆ ಅವರ ಅರ್ಹತೆಗೆ ಸಂಬಂಧಿಸಿದ ಗ್ರೂಪ್-ಡಿ ದರ್ಜೆಯ ದೈಹಿಕ ಶ್ರಮದ ಕೆಲಸಗಳನ್ನು ನೀಡುತ್ತಿರುವುದು ಸೇವಾ ನಿಯಮಗಳ ಉಲ್ಲಂಘನೆಯಾಗುವುದಿಲ್ಲವೇ ಈ ಬಗ್ಗೆ ಸರ್ಕಾರದ ನಿಲುವೇನು; | ಈ ರೀತಿಯ ಪ್ರಕರಣಗಳು ಇರುವುದಿಲ್ಲ. |

| | | |
|---|---|---|
| ಈ) | ಮರುನಾಮಕಾರಣಗೊಂಡ ಈ ಹುದ್ದೆಗಳ ಪದನಾಮದಿಂದಾಗಿ ನೌಕರರ ಸಾಮಾಜಿಕ ಗೌರವ ಮತ್ತು ಸೇವಾ ಹಿರಿತನಕ್ಕೆ ಧಕ್ಕೆಯಾಗುತ್ತಿರುವುದು ನಿಜವೇ; ಈ ಹುದ್ದೆಗಳನ್ನು ಪುನಃ ಈ ಹಿಂದಿನಂತೆ ವರ್ಕ್ ಇನ್ಸ್ ಪೆಕ್ಟರ್ ಎಂದೇ ಪರಿಗಣಿಸಿ ಅವರ ದರ್ಜೆಗೆ ಅನುಗುಣವಾದ ತಾಂತ್ರಿಕ ಕಾರ್ಯಗಳನ್ನು ಮಾತ್ರ ವಹಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಅನ್ವಯಿಸುವುದಿಲ್ಲ. |
| ಉ) | ಕೆಪಿಎಸ್‌ಸಿ ಯಿಂದ ಆಯ್ಕೆ ಹೊಂದಿರುವ ನೌಕರರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ತಾಂತ್ರಿಕ ಹುದ್ದೆಯಿಂದ ತಾಂತ್ರಿಕೇತರ ಹುದ್ದೆಗೆ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದೆಯೇ? | ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 156 ಎಸಿಬಿ 2009, ದಿನಾಂಕ:11.04.2011ರಂದು ಮಹಾನಗರ ಪಾಲಿಕೆಗಳ ವೃಂದ ಮತ್ತು ನೇಮಕಾತಿ ನಿಯಮವು ಜಾರಿಗೆ ಬಂದಿರುತ್ತದೆ. ವೃಂದ ಬದಲಾವಣೆಗೆ ಭಾಗ-IIIರಲ್ಲಿ ಸೂಚಿಸಿರುವ ಹುದ್ದೆಗಳಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ: ನಅಇ 108 ಎಂಎನ್‌ಇ 2026 (ಇ)**

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು